ಅಕ್ರಮ ಒತ್ತುವರಿ ಜಮೀನಿನ ಸಕ್ರಮಕ್ಕೆ ಅರ್ಜಿಸಲ್ಲಿಸಲು ಒಂದು ವರ್ಷ ಕಾಲಾವಕಾಶ ಕೊಡುವ ಬಗ್ಗೆ

2975 - ಶ್ರೀ ಅಪ್ಪಚ್ಚು ರಂಜನ್. ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಕ್ರಮ ಸಕ್ರಮಕ್ಕೆ (ಒತ್ತುವರಿ) ಅರ್ಜಿ ಸಲ್ಲಿಸುವ ಸಮಯ ಮುಗಿದಿರುವುದರಿಂದ ಸದರಿ ಸಮಯವನ್ನು ಇನ್ನೂ ಒಂದು ವರ್ಷ ವಿಸ್ತರಿಸುವ ಉದ್ದೇಶ ಸರ್ಕಾರಕ್ಕಿದೆಯೇ?*

ಆ) *ಮನೆ ಕಟ್ಟಿಕೊಂಡು ವಾಸಮಾಡುತ್ತಿರುವ 5 ಸೆಂಟ್ ಒಳಗೆ ಇರುವ ಫಲಾನುಭವಿಗಳಿಗೆ ಪಟ್ಟ ಕೊಡುವಲ್ಲಿ ಈಗಾಗಲೆ ಸಮಯ ಮುಗಿದಿದ್ದು ಅದನ್ನು ಸಹ ವಿಸ್ತರಿಸುವಲ್ಲಿ ಸರ್ಕಾರದ ನಿಲುವೇನು? ಯಾವಾಗ ಕ್ರಮ ಕೈಗೊಳ್ಳಲಾಗುವುದು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ.

ಆ) ಪರಿಶೀಲಿಸಲಾಗುತ್ತಿದೆ.

ರಾಜೀವ್ ಗಾಂಧಿ ವಸತಿ ನಿಗಮದ ಸ್ಥಾಪನೆ

2977 - ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜೀವ್ ಗಾಂಧಿ ವಸತಿ ನಿಗಮವನ್ನು ಸ್ಥಾಪಿಸಲಾಗಿದಿಯೆ?*

ಆ) *ಹಾಗಿದ್ದಲ್ಲಿ ಇದರ ಉದ್ದೇಶಗಳೇನು?*

ಇ) *ರಾಜ್ಯದಲ್ಲಿ ವಿವಿಧ ಯೋಜನೆಗಳ ಅನ್ವಯ ನಿರ್ಮಾಣ ಮಾಡಲು ಉದ್ದೇಶಿಸಿರುವ ಮನೆಗಳ ಸಂಖ್ಯೆ ಎಷ್ಟು ?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಹೌದು.

ಆ) ಈ ನಿಗಮವನ್ನು ರಾಜ್ಯದ ಆರ್ಥಿಕವಾಗಿ ಹಿಂದುಳಿದ ಜನರಿಗಾಗಿ ಹಮ್ಮಿಕೊಂಡ ಆಶ್ರಯ ಅಂಬೇಡ್ಕರ್ ವಿಶೇಷ ವೃತ್ತಿ ನಿರತದವರಾದ ಹಮಾಲರು, ನೇಕಾರರು, ಮೀನುಗಾರರು ಬೇಡಿ ಕಾರ್ಮಿಕರು ಮುಂತಾದವರಿಗಾಗಿ ಇರುವ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲು ರಚಿಸಲಾಗಿದೆ.

ಇ) 1) ಆಶ್ರಯ-ಗ್ರಾಮೀಣ - 1,30,000

ನಗರ - 25,000